# ಅವಳೀಗ ಏನು ಮಾಡಬೇಕು?

■ ಗೌರಿ



ಅವಳಿಗೆ ಪ್ರಿಯಕರ ಸಿಕ್ಕಿದ್ದಾನೆ! ಆಕಾಶಕ್ಕೇ ರಂಗು ಬಳಿಯಬಲ್ಲ ಗೆಳೆಯ, ಭೂಮಿಯನ್ನು ತೂಗುಮಂಚವಾಗಿಸಬಲ್ಲ ಪ್ರೇಮಿ. ಅವನ ಮನೆ ಪರ್ಫೆಕ್ಷನಿಸ್ಟ್ ಅನಿಸುವಷ್ಟು ಅಚ್ಚುಕಟ್ಟು. ಅವನ ಬಳಿ ಇರುವ ಪುಸ್ತಕಗಳ ಸಂಗ್ರಹ ವ್ಯಕ್ತಿತ್ವದ ಪ್ರತಿಬಿಂಬವೇ ಹೌದು. ಎಲ್ಲ ಇದ್ದೂ ತನ್ನಷ್ಟಕ್ಕೆ ತಾನು ಅಂತರ್ಮುಖಿಯಂತೆ ಇರುವವ. ಸೋತವನಂತೆ ಒರಗುವವ, ಒಟ್ಟಾರೆ ಇಂಥ ಹುಡುಗ ಸಿಕ್ಕಿದ್ದು ತನ್ನ ಅದೃಷ್ಟ ಅನಿಸುವಂಥ ಹುಡುಗ.

ಅವಳು ಆಕಾಶದ ರಂಗನ್ನೆಲ್ಲ ಕಣ್ಣಿಂದಲೇ ಕುಡಿದುಬಿಡುವ ಹಾಗೆ ಸಂಭ್ರಮಿಸುತ್ತಿದ್ದಾಳೆ. ಅವನ ಕಣ್ಣಂಚಲ್ಲಿ ಕಾಣುವ ತುಸುವೇ ವಿಷಾದದ ಸುಳಿ ಇವಳ ಎದೆಯಲ್ಲಿ ಬಿರುಗಾಳಿಯನ್ನೇ ಎಬ್ಬಿಸುತ್ತಿದೆ. ಅವನ ಅಸ್ತವ್ಯಸ್ತ ಅಡುಗೆಮನೆ ಈಗ ಇವಳದ್ದಾಗಿದೆ. ಅವನ ಜೊತೆ ಕಳೆಯುವ ಪ್ರತಿಗಳಿಗೆಯೂ ಎದೆಯಲ್ಲಿ ಅಳಿಸಲಾಗದ ಸಹಿ ಹಾಕುತ್ತಿವೆ.

ಇದೇ ಖುಷಿಯಲ್ಲಿ ಅವಳು ಮಂಚದ ಮೇಲೆ ಮಲಗಿ ಗೆಳತಿಗೆ ಮೆಸೇಜ್ ಮಾಡುತ್ತಾಳೆ. ತಾವಿಬ್ಬರೂ ಸೇರಿ ಅಡುಗೆ ಮಾಡಿದ್ದನ್ನು, ಒಬ್ಬರ ಸನಿಹದಲ್ಲಿ ಒಬ್ಬರು ಪುಳಕಗೊಂಡಿದ್ದು, ಮುಂದೆ ಮದುವೆಯಾಗಿ ಸಂಸಾರ ಮಾಡುವ ಕನಸುಗಳನ್ನು ಹಂಚಿಕೊಳ್ಳುತ್ತಿರುವಾಗಲೇ ಅವನು ಬಂದು ಅವಳನ್ನು ತಬ್ಬುತ್ತಾನೆ. ಮುತ್ತಿನ ಮಳೆ ಸುರಿಸುತ್ತಾನೆ. ಮುದ್ದಿನ ಹೊಳೆಯಲ್ಲಿ ತೇಲಿಸುತ್ತಾನೆ.

ತನ್ನನ್ನಪ್ಪಿದ ಅವನು ಹೊರಳಿದಾಗ ಅವಳು ಅವನ ಭುಜದ ಮೇಲಿರುವ ಹಚ್ಚೆಯನ್ನು ನೋಡುತ್ತಾಳೆ. ರಂಗಿನ ಆಕಾಶಕ್ಕೆಲ್ಲ ಒಮ್ಮೆಲೇ ಕಾರ್ಮೋಡ ಕವಿದ ಹಾಗೆ, ತೂಗುಮಂಚ ಕಡಿದು ಕೆಳಕ್ಕಪ್ಪಳಿಸಿದ ಹಾಗೆ ಸಂಭ್ರಮದ ಅಲೆಯಲ್ಲಿ ತೇಲುತ್ತಿದ್ದ ಮನಸ್ಸು ಜರ್ರನೇ ಕುಸಿದುಬೀಳುತ್ತದೆ. ನಂತರದ ಪ್ರಣಯಕಾಲವೆಲ್ಲ ಅವಳಿಗೆ ಶಿಕ್ಷೆ. ಅವನ ಮುತ್ತು, ಸ್ಪರ್ಶ ಎಲ್ಲವೂ ಮುಳ್ಳುಕಂಟಿಯ ಒಡನಾಟ.

ಮರುದಿನ ಬೆಳಿಗ್ಗೆ ಎದ್ದವಳೇ ಆ ಹುಡುಗಿ ತನ್ನ ಗೆಳತಿಗೆ ಕಾಲ್ ಮಾಡುತ್ತಾಳೆ. ನಿನ್ನೆ ರಾತ್ರಿ ತನ್ನೊಂದಿಗೆ ಕಳೆದ ಪ್ರಿಯಕರನೇ ಹತ್ತು ವರ್ಷದ ಹಿಂದೆ ತನ್ನ ಮೇಲೆ ಅತ್ಯಾಚಾರವೆಸಗಿದ್ದ ಎಂಬುದು ಅವಳಿಗೆ ಅವನ ಭುಜದ ಮೇಲಿನ ಹಚ್ಚೆಯಿಂದ ತಿಳಿದುಹೋಗಿದೆ.

ಈಗ ಅವಳು ಏನು ಮಾಡಬೇಕು?

ಈ ಪ್ರಶ್ನೆಯನ್ನೇ 'ಹೀ ಈಸ್ ದಿ ಒನ್' ಕಿರುಚಿತ್ರ ನಮ್ಮ ಮುಂದಿಡುತ್ತದೆ. ಈ ಚಿತ್ರದ ಆತ್ಮ ಇರುವುದು ಅದರ ಕತೆಯ ಹಂದರದೊಳಗಲ್ಲ. ಹಾಗಾಗಿಯೇ ಇಡೀ ಕಿರುಚಿತ್ರದ ಕಥೆಯನ್ನು ಹೇಳಿದರೂ ಕಿರುಚಿತ್ರದ ಆತ್ಮದ ಕಾಂತಿ ಮಸುಕಾಗುವುದಿಲ್ಲ. ಅದರ ಆತ್ಮ ಇರುವುದು ಈ ಕೊನೆಯ ಪ್ರಶ್ನೆಯಲ್ಲಿ.

ಲೈಂಗಿಕ ದೌರ್ಜನ್ಯಕ್ಕೆ ನೂರು ಸಾವಿರ ಮುಖಗಳಿವೆ. ಹಾಗೆಯೇ ಬಲವಂತದ ಸಂಭೋಗವಷ್ಟೇ ರೇಪ್ ಎಂಬ ಮೂರ್ಖ ತಪ್ಪುತಿಳಿವಳಿಕೆಯೂ ನಮ್ಮಲ್ಲಿದೆ. ಈ ಮನಸ್ಥಿತಿಯ ಸಮಾಜಕ್ಕೆ, ಹೇಗಾದ್ರೂ ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡು ಹೋಗಿ ಎನ್ನುವ ಸೋಗಲಾಡಿ ವಿವೇಕದ ಮಾತುಗಳನ್ನಾಡುವವರಿಗೆ ನಿರ್ದೇಶಕಿ ಇಲ್ಲಿ ಒಂದು ಪ್ರಶ್ನೆಯನ್ನಿಡುತ್ತಾರೆ. ಉತ್ತರದ ಅಗತ್ಯವೇ ಇಲ್ಲ ಎನ್ನುವ ಹಾಗಿರುವ ಆ ಪ್ರಶ್ನೆ ನಮ್ಮೊಳಗನ್ನು ಚುಚ್ಚುತ್ತಲೇ ಇರುತ್ತದೆ. ಹತ್ತು ವರ್ಷದ ಹಿಂದೆ ಅತ್ಯಾಚಾರ ಮಾಡಿದ್ದ ವ್ಯಕ್ತಿಯೇ ಇಂದು ಪ್ರಿಯಕರವಾಗಿ ಎದುರಿಗಿರುವಾಗ ಅವಳು ಏನು ಮಾಡಬಹುದು?

ತಾಂತ್ರಿಕ ದೃಷ್ಟಿಯಿಂದಲೂ ಈ ಕಿರುಚಿತ್ರ ಗಟ್ಟಿಯಾಗಿದೆ. ರಾತ್ರಿಯ ಒಳಾಂಗಣ ಮತ್ತು ಹೊರಾಂಗಣ ದೃಶ್ಯಗಳನ್ನು ಅದರ ಅನುಭವ ಸೋರದ ಹಾಗೆ ಸೆರೆಹಿಡಿಯಲಾಗಿದೆ. ನಾಯಕಿ ಪಾತ್ರದಲ್ಲಿ ನಟಿಸಿರುವ ಜೆಸ್ಸಿ ಅವರ ಪ್ರಭಾವಶಾಲಿ ನಟನೆ ಈ ಕಿರುಚಿತ್ರವನ್ನು ಮತ್ತಷ್ಟು ಎತ್ತರಕ್ಕೆ ಏರಿಸುವ ಶಕ್ತಿಹೊಂದಿದೆ. ಸಂಭ್ರಮವನ್ನೂ, ವಿಷಾದವನ್ನೂ, ಹತಾಶೆಯನ್ನೂ ಕಣ್ಣಲ್ಲಿ ಅವರು ವ್ಯಕ್ತಪಡಿಸಿರುವ ರೀತಿ ಅನನ್ಯ.

ನೋಡಿಸಿಕೊಳ್ಳುವ ಜನಪ್ರಿಯ ದಾರಿಯ ಮೂಲಕ ಹಾಯುತ್ತಲೇ ಅನಿರೀಕ್ಷಿತ ತಿರುವಿನಲ್ಲಿ ನೋಡುಗನನ್ನು ನಿಲ್ಲಿಸಿ ಪಟ್ಟನೇ ಮಾಯವಾಗಿಬಿಡುವ ಈ ಕಿರುಚಿತ್ರ ಎತ್ತುವ ಪ್ರಶ್ನೆಯನ್ನು ಪ್ರತಿಯೊಬ್ಬರೂ ಏಕಾಂತದಲ್ಲಿಯೇ ಎದುರಿಸಬೇಕು ಎಂದು ಒತ್ತಾಯಿಸುತ್ತದೆ.



ಹೆಸರು: ಹೀ ಈಸ್ ದಿ ಒನ್
ನಿರ್ದೇಶಕಿ: ಜೆಸ್ಸಿ ಕನ್ವೈಲರ್
ನಿರ್ಮಾಣ: ತಾಶಾ ಪೆಟ್ಟಿ, ಪೌಲ್ ಯೂಂಗ್, ರಿಚರ್ಡ್ ಕಾರ್ಡ್
ತಾರಗಣ: ಜೆಸ್ಸಿ, ಲುಕಾ ಜೋನ್ಸ್
ಸಂಗೀತ: ಎಮ್‌ಜೆ ಮ್ಯಾನಾರ್ಕಿ
ಛಾಯಾಗ್ರಹಣ: ರಿಚರ್ಡ್ ಕಾರ್ಡ್

ಈ ಕಿರುಚಿತ್ರ ವೀಕ್ಷಣೆಗೆ **bit.ly/3td9nib** ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.